ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭ ಪಡೆದ ಭಾಗ್ಯವಂತ ಭಾರತೀಯ ನಾರಿಯರು

# ನೃಪಬಾಲಾ ಘೋಷ್

**ಡಾ. ಶೈಲಜಾ ಆಮೂರ**

**ಸ್ವಾ**ಮಿ ವಿವೇಕಾನಂದರ ಪರಿವ್ರಾಜಕ ಜೀವನದ ದಿನಗಳಲ್ಲಿ ಅವರು ೧೮೯೦ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ ಮೀರತ್‌ಗೆ ಹೋದರು. ಚಳಿಗಾಲದ ಒಂದು ದಿನ ರಾತ್ರಿ ಸುಮಾರು ೮ ಗಂಟೆಯ ವೇಳೆಗೆ ಸ್ವಾಮಿ ಅಖಂಡಾನಂದರು ಡಾಕ್ಟರ್ ತ್ರೈಲೋಕ್ಯನಾಥ ಘೋಷನ ಸಹೋದರನ ಮುಂದೆ ಪವಿತ್ರ ಗ್ರಂಥವೊಂದರ ಪಠನ ಮಾಡುತ್ತಿದ್ದಾಗ ಸ್ವಾಮಿ ವಿವೇಕಾನಂದರು ಸ್ವಾಮಿ ಬ್ರಹ್ಮಾನಂದ, ಸ್ವಾಮಿ ತುರೀಯಾನಂದ, ಸ್ವಾಮಿ ಶಾರದಾನಂದ ಹಾಗೂ ವೈಕುಂಠನಾಥ ಸನ್ಯಾಲರೊಡನೆ ಹಠಾತ್ತಾಗಿ ಡಾಕ್ಟರ್ ಘೋಷನ ಮನೆಗೆ ಬಂದರು. *(Prabuddha Bharata, Jan 1992, P-28).* ಈ ವೇಳೆಯಲ್ಲಿಯೇ ಡಾಕ್ಟರ್ ತ್ರೈಲೋಕ್ಯನಾಥನ ಇಬ್ಬರು ಹೆಣ್ಣುಮಕ್ಕಳಿಗೂ ಸ್ವಾಮಿ ವಿವೇಕನಂದರ ಸಾನ್ನಿಧ್ಯದ ಸೌಭಾಗ್ಯ ಒದಗಿ ಬಂತು. ಹಿರಿಯ ಸಹೋದರಿಯ ಹೆಸರು ನೃಪಬಾಲಾ ಹಾಗೂ ಕಿರಿಯವಳ ಹೆಸರು ಶಶಿಬಾಲಾ. ಸ್ವಾಮೀಜಿ ಈ ಇಬ್ಬರೂ ಪುಟ್ಟ ಹುಡಗಿಯರನ್ನು ಬಹಳ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಸ್ವಾಮೀಜಿ ಅನಾರೋಗ್ಯದ ನಿಯಮಿತ್ತವಾಗಿ, ಡಾಕ್ಟರ್ ಆರೈಕೆಯಲ್ಲಿ ಅವನ ಮನೆಯಲ್ಲಿ ಉಳಿದುಕೊಂಡಿದ್ದರು.

ಪಶ್ಚಿಮ ಬಂಗಾಳದ ಚಂದನ ನಗರದ ನಿವಾಸಿಯಾಗಿದ್ದ ಡಾಕ್ಟರ್ ತ್ರೈಲೋಕ್ಯನಾಥ ಘೋಷ್ ಮೀರತ್‌ನ ಸರಕಾರಿ ಆಸ್ಪತ್ರೆಯಲ್ಲಿ ಉಪ ಶಸ್ತ್ರಚಿಕಿತ್ಸಾ ವೈದ್ಯನಾಗಿ (Assistant Civil Surgeon) ಕಾರ್ಯ ನಿರ್ವಹಿಸುತ್ತಿದ್ದ. ಸ್ವಾಮೀಜಿ ಹೃಷೀಕೇಶದಲ್ಲಿ ಪರ್ಯಟನೆ ಮಾಡುತ್ತಿದ್ದಂತೆ ಅವರ ಆರೋಗ್ಯದ ಸ್ಥಿತಿ ಹದಗೆಟ್ಟಿತು. ಸ್ವಾಮಿ ಅಖಂಡಾನಂದರ ಸಲಹೆಯ ಮೇರೆಗೆ ಶುಶ್ರೂಷೆಗಾಗಿ ಅವರು ಮೀರತ್‌ಗೆ ಬಂದರು. ಸ್ವಾಮಿ ಅಖಂಡಾನಂದರೂ ಕೂಡ ತ್ರೈಲೋಕ್ಯನಾಥನ ಮನೆಯಲ್ಲಿ ಸುಮಾರು ಒಂದೂವರೆ ತಿಂಗಳುಗಳ ಕಾಲ ಚಿಕಿತ್ಸೆಗೆಂದೇ ಉಳಿದುಕೊಂಡಿದ್ದರು. ಪ್ರತಿಷ್ಠಿತ ವೈದ್ಯನಾಗಿದ್ದ ತ್ರೈಲೋಕ್ಯನಾಥನ ಮನೆಯಲ್ಲಿ ತುಂಬ ಜನ ವಾಸಿಸುತ್ತಿದ್ದರು. ಆತನ ಸಹೋದರ ಪ್ರಸನ್ನಕುಮಾರ ಘೋಷ ಹಾಗೂ ಜ್ಯೇಷ್ಠ ಪುತ್ರಿ ನೃಪಬಾಲಾ ಶ್ರೀರಾಮಕೃಷ್ಣರ ಭಕ್ತನಾಗಿದ್ದ ದೇವೇಂದ್ರನಾಥ ಮಜುಮದಾರನ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ಸಾಧನೆ ಮಾಡುತ್ತಿದ್ದರು. ಸ್ವಾಮಿ ವಿವೇಕಾನಂದರು ನೃಪಬಾಲಾಳನ್ನು 'ಬಡೋ ಮಾ' (ದೊಡ್ಡ ಮಗಳು) ಎಂದು ಸಂಬೋಧಿಸುತ್ತಿದ್ದರು.

ಸ್ವಾಮಿ ವಿವೇಕಾನಂದರು ಬರೆದ ಲೇಖನವೊಂದರಲ್ಲಿ ನೃಪಬಾಲಾಳ ಸ್ವಾಮಿ ವಿವೇಕಾನಂದರೊಂದಿಗಿನ ಒಡನಾಟದ ಬಗ್ಗೆ ಹಾಗೂ ಅವಳ ಸ್ಮೃತಿಗಳ ಬಗ್ಗೆ ನಾವು ವಿವರವಾಗಿ ನೋಡಬಹುದಾಗಿದೆ. *('ಸ್ಮೃತೀರ್ ಆಲೋಯೇ ಸ್ವಾಮೀಜಿ'–ಸ್ವಾಮಿ ಪೂರ್ಣಾತ್ಮಾನಂದ, ಬಂಗಾಳಿ ಗ್ರಂಥ, ಪು. ೨೯೦)* ನೃಪಬಾಲಾಳ ಸ್ವಾಮಿ ವಿವೇಕಾನಂದರ ಸ್ಮೃತಿಗಳನ್ನು ಅವಳದೇ ಮಾತುಗಳಲ್ಲಿ ತಿಳಿಯೋಣ:

''ಆಗ ನಾವಿನ್ನೂ ಚಿಕ್ಕಮಕ್ಕಳಾಗಿದ್ದೆವು. ಸ್ವಾಮೀಜಿ ನಮ್ಮನ್ನು ತುಂಬ ಅಕ್ಕರೆಯಿಂದ ನೋಡುತ್ತಿದ್ದರು ಹಾಗೂ ನಮ್ಮನ್ನು 'ಇಲ್ಲಿ ಬನ್ನಿ' ಎಂದು ಕರೆಯುತ್ತಿದ್ದರು. ಇದು ಸುಮಾರು ೧೮೯೦ನೇ ಇಸವಿಯ ಕೊನೆಯ ದಿನಗಳಲ್ಲಿ ನಡೆದ ಘಟನೆ. ನಮ್ಮ ತಂದೆಯ ಚಿಕ್ಕಮ್ಮ ನಮಗೆ 'ಅವರು ಶಾಂತಚಿತ್ತರಾಗಿ ಜಪ, ಧ್ಯಾನಗಳಲ್ಲಿ ತೊಡಗಿರುತ್ತಾರೆ. ನೀವು ಅವರಿಗೆ ತೊಂದರೆ ಮಾಡಬೇಡಿ' ಎಂದು ಎಚ್ಚರಿಕೆಯ ಮಾತುಗಳನ್ನು ಹೇಳುತ್ತಿದ್ದರು. ನನ್ನ ತಂದೆಯವರು, ಇಬ್ಬರೂ ಸ್ವಾಮೀಜಿಗಳಿಗಿಂತ (ಸ್ವಾಮಿ ವಿವೇಕಾನಂದ ಮತ್ತು ಸ್ವಾಮಿ ಅಖಂಡಾನಂದ) ವಯಸ್ಸಿನಲ್ಲಿ ಹಿರಿಯರಾಗಿದ್ದರು. ಸ್ವಾಮೀಜಿ ಎಂದಿಗೂ ನನ್ನ ತಂದೆಯ ಎದುರು ತಂಬಾಕು ಸೇವಿಸುತ್ತಿರಲಿಲ್ಲ. ಉದ್ಯಾನದಲ್ಲಿದ್ದ ಒಂದು ಮೂಲೆಯ ಕೊಠಡಿಯೊಂದರಲ್ಲಿದ್ದ ಕಟ್ಟಿಗೆಯ ಒಂದು ಬೆಂಚಿನ ಮೇಲೆ ಕುಳಿತು ಧೂಮಪಾನ ಮಾಡುತ್ತಿದ್ದರು. ಜೋರಾಗಿ ನಗುತ್ತ, 'ನಾನು ಧೂಮಪಾನ ಮಾಡುತ್ತಿದ್ದೇನೆಂದು ನಿಮ್ಮ ತಂದೆಗೆ ತಿಳಿಸಬೇಡಿ' ಎಂದು ಚೇಷ್ಟೆ ಮಾಡುತ್ತಿದ್ದರು. ಆಧ್ಯಾತ್ಮಿಕ ಮಹತ್ವಾಕಾಂಕ್ಷಿಯಾಗಿದ್ದರೂ ಅವರು ಯಾವಾಗಲೂ ಆನಂದದಿಂದಿರುತ್ತಿದ್ದರು. ನನ್ನನ್ನು ಹಾಗೂ ನನ್ನ ತಂಗಿ ಶಶಿಬಾಲಾಳನ್ನು ಯಾವಾಗಲೂ ಕೀಟಲೆ ಮಾಡುತ್ತಿದ್ದರು.

''ನನಗೆ ನಿಕಾಶಾ ಮಾಶಿ ಎಂದೂ ನನ್ನ ತಂಗಿಯನ್ನು ಶೂರ್ಪನಖಾ ಮಾಶಿ ('ಮಾಶಿ' ಎಂದರೆ ಚಿಕ್ಕಮ್ಮ ಎಂದರ್ಥ) ಎಂದೂ ಅವರು ಕರೆಯುತ್ತಿದ್ದರು. ಅವರ ನಗು ಹಾಗೂ ಕೀಟಲೆಯನ್ನು ಕಂಡು ನಮಗೆ ತುಂಬ ಕೋಪ ಬರುತ್ತಿತ್ತು. ನಮ್ಮ ಕೋಪದಿಂದ ಸ್ವಾಮೀಜಿ ಮತ್ತೆ ಉತ್ತೇಜಿತರಾಗಿ, 'ಕೋಪ ಮಾಡಿಕೊಳ್ಳಬೇಡಿ ಮಕ್ಕಳೇ, ನಿಕಾಶಾ ಮಾಶಿ ಹಾಗೂ ಶೂರ್ಪನಖಾ ಮಾಶಿ ಎಂದರೆ ಏನು ಸಾಮಾನ್ಯ ಜನರೆಂದು ತಿಳಿದಿದ್ದೀರಾ? ಭಗವಾನ್ ಶ್ರೀರಾಮನೇ ಅವರಲ್ಲೊಬ್ಬರ ಮೂಗನ್ನೇ ಕತ್ತರಿಸಿಬಿಟ್ಟಿದ್ದ. ಅವರ ಸಹೋದರ ವಿಭೀಷಣನಂತಹ ದೊಡ್ಡ ವ್ಯಕ್ತಿ' ಎಂದು ಮತ್ತೆ ಮತ್ತೆ ಹಾಸ್ಯ ಮಾಡುತ್ತ ಎಲ್ಲರನ್ನೂ ನಗೆಗಡಲಿನಲ್ಲಿ ತೇಲಿಸುತ್ತಿದ್ದರು. ಅವರಿಗೆ ಊಟ ಬಡಿಸುವಾಗ ನಾವು 'ಚಟ್ನಿ' ಬಡಿಸಲು ಮುಂದಾಗುತ್ತಿದ್ದೆವು. ನಮ್ಮನ್ನು ನೋಡಿ, 'ಮಾಶಿಯರೇ, ನಿಮ್ಮ ಬಾಯಿಯಲ್ಲಿ ನೀರೂರದಂತೆ ಎಚ್ಚರ ವಹಿಸಿ ಚಟ್ನಿ ಬಡಿಸಿ.

ನೀವುಗಳು ಚಟ್ನಿ ಬಡಿಸುವಾಗ ನಿಮ್ಮ ಜೊಲ್ಲು ನಮ್ಮ ಊಟದ ಎಲೆಗಳ ಮೇಲೆ ಸೋರೀತು' ಎಂದು ಕೀಟಲೆ ಮಾಡಿದ್ದುಂಟು.

''ಎಷ್ಟೋ ಸಾರಿ ಉದ್ಯಾನದಲ್ಲಿ ಓಡಾಡುತ್ತಿದ್ದಾಗ ಸ್ವಾಮೀಜಿ ಬೆರಳಿನಿಂದ ಚಿಟಿಕೆ ಬಾರಿಸುತ್ತಾ ಹಾಡು ಹೇಳುತ್ತಿದ್ದರು. ಅವರು ಮೇಲಿಂದ ಮೇಲೆ ಹಾಡುತ್ತಿದ್ದ ಹಾಡು: ಭಜನ ಪೂಜನ ಕಿಛುಈ ನಹೀ ಜಾನಿ, ಜಾನಿ ಮಾ ತೋರ್ ಚರಣ ಸಾರ್ (ನನಗೆ ಪೂಜೆ ಮಾಡುವುದು ಅಥವಾ ಭಜನೆ ಹಾಡುವುದು ಯಾವುದೂ ಗೊತ್ತಿಲ್ಲ, ನನಗೆ ಕೇವಲ ನಿನ್ನ ಪಾದ ಮಾತ್ರ ತಿಳಿದಿದೆ ಅಮ್ಮಾ) ಎಂಬ ಹಾಡು ಹಾಗೂ 'ಪ್ರಾಣಪುತುಳಿ ಮೋರ್ ಓ ಮಾ ಹರ ರಾಮ' (ಓ ತಾಯೇ, ನೀನೇ ನನ್ನ ಪ್ರಾಣ, ಶಿವನ ಪ್ರಿಯೆಯೇ) ಈ ಎರಡು ಹಾಡುಗಳು ಯಾವಾಗಲೂ ನನ್ನ ಮನಸ್ಸಿನಲ್ಲಿ ಕೇಳು ತ್ತಿರುತ್ತವೆ.

''ತುಂಬ ಚಳಿಯ ದಿನಗಳಲ್ಲಿ ಅಗ್ಗಿಷ್ಟಿಕೆಯ ಮುಂದೆ ಕಾಯಿಸಿ ಕೊಳ್ಳುತ್ತ ಸ್ವಾಮೀಜಿ ಒಂದು ಬಟ್ಟಲಿನಲ್ಲಿ ಕುದಿಸಿದ ಆಲೂಗಡ್ಡೆ ಹಾಗೂ ಬಟಾಣಿಯ ಕಾಳುಗಳನ್ನು ಸೇವಿಸುತ್ತ ಆನಂದಿಸು ತ್ತಿದ್ದರು.

''ನಾವು ಸ್ವಾಮಿ ಅಖಂಡಾನಂದರನ್ನು ಛೋಟೊ ಸ್ವಾಮಿಜಿ (ಕಿರಿಯ ಸ್ವಾಮೀಜಿ) ಎಂದು ಕರೆಯುತ್ತಿದ್ದೆವು. ಅವರು ತೆಳ್ಳಗಿದ್ದರು, ಅವರ ಜ್ಞಾಪಕ ಶಕ್ತಿ ಅಗಾಧವಾಗಿದ್ದಿತು. ಅವರು ಒಂದು ಹುಲ್ಲುರಾಶಿಯ ಮೇಲೆ ಒಬ್ಬರೇ ಕುಳಿತುಕೊಳ್ಳುತ್ತಿದ್ದರು. ಅದನ್ನು ನೋಡಿ ಸ್ವಾಮೀಜಿ ನಮಗೆ, 'ಅವನು ಒಬ್ಬನೇ ಅಲ್ಲಿ ಏಕೆ ಕುಳಿತಿದ್ದಾನೆ ಎಂಬುದು ಗೊತ್ತಿದೆಯಾ ನಿಮಗೆ? ಅವನು ತನ್ನ ತಾಯಿ, ಚಿಕ್ಕಮ್ಮಂದಿರನ್ನು ನೆನೆದು ದುಃಖಿಸುತ್ತಿದ್ದಾನೆ. ತಾನು ಅಳುವುದು ಯಾರಿಗೂ ಕಾಣಿಸಬಾರದು ಎಂದು ಒಬ್ಬನೇ ಅಲ್ಲಿ ಹೋಗಿ ಕುಳಿತು ಅಳುತ್ತಿದ್ದಾನೆ. ಏಕೆ ಅಳಬೇಕು? ಬೇಕಾದರೆ ಹೋಗಿ ಅವರನ್ನು ಭೇಟಿಯಾಗಬೇಕು. ಇವನೇನೋ ಹೋಗುವವನಿದ್ದಿರಬಹುದು; ಆದರೆ ಅವರೇ 'ನೀನು ಬರಬೇಡ ನಡೆ' ಎಂದು ಹೇಳಿರಲೂಬಹುದು. ಈಗಂತೂ ಅವನು ಇಲ್ಲಿಂದ ಹೋಗುವುದಿಲ್ಲ ಬಿಡಿ. ಇಂತಹ ಸುಗ್ರಾಸ ಭೋಜನ ಅವನಿಗೆ ಬೇರೆ ಎಲ್ಲಿ ದೊರೆಯಲು ಸಾಧ್ಯ?' ಎಂದು ಹೇಳುತ್ತಿದ್ದರು. ಅವರ ಮಾತುಗಳನ್ನು ಆಲಿಸುತ್ತ ನಾವು ಬಿದ್ದು ಬಿದ್ದು ನಗುತ್ತಿದ್ದೆವು. ಅವರ ಒಡನಾಟದಲ್ಲಿ ನಮಗೆ ಅದೆಷ್ಟು ಹತ್ತಿರದವರೆನಿಸಿದ್ದರೆಂದರೆ, ಅವರು ನಮ್ಮ ಕುಟುಂಬದ ಒಬ್ಬ ಸದಸ್ಯ ಎಂದೇ ಭಾವಿಸಿಬಿಟ್ಟಿದ್ದೆವು. ನಮ್ಮ ತಂದೆಯ ಚಿಕ್ಕಮ್ಮ ಬಹಳಷ್ಟು ಸಾರಿ, 'ಅವರು ಸಾಧುಗಳು, ಅವರಿಗೆ ನೀವುಗಳು ಸುಮ್ಮನೆ ತೊಂದರೆ ಕೊಡಬೇಡಿ' ಎಂದು ಹೇಳುತ್ತಿದ್ದರು. ನಾವು ಮಾತ್ರ ಅವರ ಭೇಟಿ ಮಾಡುತ್ತಲೇ ಇದ್ದೆವು.

''ನನಗೆ ಸ್ವಾಮೀಜಿಯವರ ಬಗೆಗೆ ಇನ್ನೊಂದು ಆಶ್ಚರ್ಯಕರ ಸಂಗತಿ ಜ್ಞಾಪಕದಲ್ಲಿದೆ. ಅವರು ದೊಡ್ಡ ದೊಡ್ಡ ಪುಸ್ತಕಗಳನ್ನು ಲೈಬ್ರರಿಯಿಂದ ತೆಗೆದುಕೊಂಡು ಬಂದು ಒಂದೇ ದಿನದಲ್ಲಿ ಅದನ್ನು ತಿರುಗಿಸುತ್ತಿದ್ದರು. ಒಂದು ದಿನ ಆ ವಾಚನಾಲಯದ ಅಧಿಕಾರಿ ಸ್ವಾಮೀಜಿಗೆ, 'ಯಾರಿಗೂ ಇಂತಹ ಪುಸ್ತಕಗಳನ್ನು ಒಂದು ತಿಂಗಳಿನಲ್ಲಿ ಓದಿ ಮುಗಿಸುವುದು ಅಸಾಧ್ಯ. ನೀವೇನು ಹೀಗೆ ಒಂದೇ ದಿನದಲ್ಲಿ ವಾಪಸ್ಸು ಮಾಡುತ್ತೀರಲ್ಲ?' ಎಂದು ತನ್ನ ಮನದಲ್ಲಿ ಮೂಡಿದ್ದ ಸಂದೇಹವನ್ನು ಕೇಳಿಯೇ ಬಿಟ್ಟ. ಆಗ ಸ್ವಾಮೀಜಿ 'ಈ ಗ್ರಂಥಗಳಲ್ಲಿಯ ಯಾವುದೇ ಮೂಲೆಯಲ್ಲಿರುವ ಯಾವುದೇ ವಿಷಯದ ಬಗ್ಗೆ ನೀನು ನನಗೆ ಪ್ರಶ್ನೆ ಮಾಡಬಹುದು' ಎಂದರು. ಸ್ವಾಮೀಜಿ ನೀಡುತ್ತಿದ್ದ ಉತ್ತರಗಳನ್ನು ಕೇಳುತ್ತಿದ್ದ ವಾಚನಾಲಯದ ಅಧಿಕಾರಿ ಆಶ್ಚರ್ಯದಿಂದ ಮೂಕ ವಿಸ್ಮಿತನಾಗಿದ್ದ.''

ನೃಪಬಾಲಾಳಿಂದ ದೊರೆತ ಈ ಎಲ್ಲ ವಿವರಗಳನ್ನು ಸ್ವಾಮಿ ನಿರ್ಲೇಪಾನಂದರು ದಾಖಲಿಸಿಕೊಂಡಿದ್ದರು. ಇದರ ಬಗ್ಗೆ ಸ್ವಾಮಿ ಪೂರ್ಣಾತ್ಮಾನಂದರು ಬರೆದ 'ಸ್ಮೃತೀರ ಆಲೋಯ್ ಸ್ವಾಮೀಜಿ' ಬಂಗಾಳಿ ಪುಸ್ತಕದಲ್ಲಿ ವಿವರಣೆಯಿದೆ.

*ಗ್ರಂಥಋಣ :*

*1. **Indian Women in the company of Swami Vivekananda,** Tadit Kurma Bandyopadhyay*

*೨. ಸ್ವಾಮಿ ಪೂರ್ಣಾತ್ಮಾನಂದ ವಿರಚಿತ ಬಂಗಾಳಿ ಪುಸ್ತಕ **'ಸ್ಮೃತೀರ ಆಲೋಯ್ ಸ್ವಾಮೀಜಿ'***

*೩. **Prabuddh Bharata,** 1992 January, p.28.*

ಹಿಂದೂ ನಾರಿಯರು ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರವೃತ್ತಿಯವರು. ಬಹುಶಃ ಪ್ರಪಂಚದ ಇತರ ನಾರಿಯರಿಗಿಂತ ಹೆಚ್ಚು ಎಂದು ಬೇಕಾದರೆ ಹೇಳಬಹುದು. ನಾವು ಈ ಪವಿತ್ರ ಭಾವನೆಯನ್ನು ರಕ್ಷಿಸಿಕೊಂಡು ನಮ್ಮ ಸ್ತ್ರೀಯರ ಬುದ್ಧಿಯ ಬೆಳವಣಿಗೆಗೆ ಅವಕಾಶ ಕೊಟ್ಟರೆ ಭಾರತದ ಭವಿಷ್ಯ ನಾರಿಯು ಇಡೀ ವಿಶ್ವಕ್ಕೇ ಆದರ್ಶವಾಗುವಳು.

ಆದರ್ಶ ನಾರಿಯರ ಚರಿತ್ರೆಗಳನ್ನು ವಿದ್ಯಾರ್ಥಿನಿಯರು ಮುಂದೆ ಸರ್ವದಾ ಇಟ್ಟು ಉಚ್ಚ ತ್ಯಾಗರೂಪವಾದ ವ್ರತದಲ್ಲಿ ಅವರಿಗೆ ಅನುರಾಗ ಹುಟ್ಟುವಂತೆ ಮಾಡಬೇಕು. ಸೀತೆ, ಸಾವಿತ್ರಿ, ದಮಯಂತಿ, ಲೀಲಾವತಿ, ಖನಾ, ಮೀರಾ – ಇವರ ಜೀವನಚರಿತ್ರೆಗಳನ್ನು ಹೆಂಗಸರಿಗೆ ತಿಳಿಯಪಡಿಸಿ ತಮ್ಮ ಜೀವನಗಳನ್ನೂ ಹೀಗೆಯೇ ನಡೆಸಿಕೊಂಡು ಬರಬೇಕೆಂದು ಹೇಳಬೇಕು.

— ಸ್ವಾಮಿ ವಿವೇಕಾನಂದ